


ಚಿತ್ರ: ಎಸ್.ಕೆ.ದಿನೇಶ್

ಈಗಷ್ಟೇ ಶಾಲೆಗಳು ಪ್ರಾರಂಭವಾಗಿವೆ. ಮಕ್ಕಳು ಪುಸ್ತಕ ಪರಿಕರಗಳನ್ನು ಹೊಂದಿಸಿಕೊಂಡು ಶಾಲೆಗೆ ಹೋಗಲು ಶುರುಮಾಡುತ್ತಿರುವ ಈ ಸಮಯದಲ್ಲಿ ಪರೀಕ್ಷೆಗಳ ಬಗೆಗೆ ಯೋಚಿಸುವ ಅಗತ್ಯವೇನಿದೆ ಎನ್ನಿಸುತ್ತಿರಬೇಕಲ್ಲವೇ? ಈ ಬರಹ ಮುಂದಿನ ವರ್ಷದ, ಅದರ ಮುಂದಿನ ವರ್ಷದ–– ಹೀಗೆ ಪ್ರತಿವರ್ಷವೂ ಬರುವ ಪರೀಕ್ಷೆಗಳ ಬಗೆಗೆ. ಪರೀಕ್ಷೆ ಎಂಬ ಮಹಾಜ್ವರವನ್ನು ಸೃಷ್ಟಿಸಿ ಪೋಷಕರು ತಮ್ಮ ಮಕ್ಕಳ ಮೇಲೆ ಹೇರುತ್ತಿರುವ ಭಾರದ ಬಗೆಗೆ. ಹಾಗಾಗಿ ಇದನ್ನು ಓದಲು ಈಗ ಸೂಕ್ತ ಸಮಯ.

ಡಿಸೆಂಬರ್ ತಿಂಗಳು ಬರುವ ಹೊತ್ತಿಗೆ ಎಲ್ಲರಿಗೂ ಪರೀಕ್ಷೆಯ ಜ್ವರ ಶುರುವಾಗುತ್ತದೆ. ಮಕ್ಕಳ ಹಲವಾರು ಸಮಸ್ಯೆಗಳನ್ನು ಹೊತ್ತು ಪೋಷಕರು ಅದರಲ್ಲೂ ಹೆಚ್ಚಾಗಿ ಅಮ್ಮಂದಿರು ನನ್ನಂತಹ ಆಪ್ತಸಲಹೆಗಾರರ ಸಹಾಯ ಕೇಳುವುದು ಇದೇ ಸಮಯದಲ್ಲಿ. ಪತ್ರಿಕೆಗಳಲ್ಲಿ ಮಕ್ಕಳು ಪರೀಕ್ಷೆಗಾಗಿ ಹೇಗೆ ತಯಾರಿ ಮಾಡಬೇಕು, ಪರೀಕ್ಷೆಯನ್ನು ಹೇಗೆ ಎದುರಿಸಬೇಕು, ಮನೆಯ ವಾತಾವರಣ ಹೇಗಿರಬೇಕು, ಪೋಷಕರು ಹೇಗೆ ಸಹಾಯ ಮಾಡಬೇಕು ಮುಂತಾದವುಗಳ ಬಗೆಗೆ ಪುಂಖಾನುಪುಂಖವಾಗಿ ಬರಹಗಳು ಬರುವುದಕ್ಕೆ ಶುರುವಾಗುತ್ತದೆ. ಟೀವಿ ವಾಹಿನಿಗಳು ತಜ್ಞರಿಂದ ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎನ್ನುವ ಬಗೆಗೆ ಟಿಪ್ಸ್ ಕೊಡುವ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತವೆ. ಶಾಲಾ ಕಾಲೇಜುಗಳಿಗೂ ಇಂತಹ ತಜ್ಞರು ಭೇಟಿ ನೀಡಿ ಅಮೋಘವಾದ ಭಾಷಣಗಳನ್ನು ನೀಡುತ್ತಾರೆ. ಜೊತೆಗೆ ಮನೆಯಲ್ಲಿ ಇರುವ ಪೋಷಕರ ಮತ್ತು ಹಿರಿಯರ 24x7ರ ಉಚಿತ ಉಪದೇಶ, ಕಣ್ಗಾವಲು ಇದ್ದೇ ಇರುತ್ತದೆ.

ಬಹುಶಃ ಕಾಪಿ ಹೊಡೆಯುವುದು ಹೇಗೆ, ಲೀಕ್ ಆದ ಪ್ರಶ್ನೆ ಪತ್ರಿಕೆಗಳನ್ನು ಪಡೆಯುವುದು ಹೇಗೆ, ಯಾವ ದಿಕ್ಕಿನಲ್ಲಿ ತಲೆ ಇಟ್ಟು ಮಲಗಿದರೆ ಹೆಚ್ಚಿನ ಅಂಕಗಳು ಬರಬಹುದು, ಉತ್ತಮ ಫಲಿತಾಂಶಕ್ಕೆ ಸಹಾಯ ಮಾಡುವ ಸ್ಪೆಶಲಿಸ್ಟ್ ದೇವರು ಯಾರು–– ಮುಂತಾದ ವಿಚಾರಗಳ ಬಗೆಗೆ ಮಾತ್ರ ಯಾರೂ ಸಾರ್ವಜನಿಕವಾಗಿ ಮಾತನಾಡುವಂತೆ ಕಾಣುವುದಿಲ್ಲ! ಈ ವಿಷಯಗಳಲ್ಲಿ ಪ್ರಚಾರಕ್ಕೆ ಇಳಿದರೆ ಭಾರಿ ಬೇಡಿಕೆ ಬರುವ ಸಾಧ್ಯತೆಗಳಿವೆ. ಆಗ ಇನ್ನುಳಿದ ರೀತಿಯ ಪರೀಕ್ಷಾ ತಜ್ಞರು ನಿರುದ್ಯೋಗಿಗಳಾಗಬಹುದು!

ಹೀಗೆ ಪರೀಕ್ಷಾ ವ್ಯವಸ್ಥೆ, ಶಿಕ್ಷಕರು, ಪೋಷಕರು ಜೊತೆಗೆ ಉತ್ತಮ ಫಲಿತಾಂಶಕ್ಕೆ ಸಹಾಯ ಮಾಡುವ ತಜ್ಞರು– ಇವರೆಲ್ಲರ ಮಣಭಾರವನ್ನು ಹೊರುವ ಮಕ್ಕಳು ವಧಾಸ್ಥಾನದಲ್ಲಿ ನಿಂತ ಬಲಿಪಶುಗಳಂತೆ ಕಾಣುತ್ತಾರೆ. ಅನಿಸಿದ್ದನ್ನು ಹೇಳಿಕೊಳ್ಳಲು ಅರಿಯದ, ಹೇಳಿಕೊಳ್ಳಲು ಸಾಧ್ಯವಿರುವುದನ್ನು ಹೇಳಿಕೊಳ್ಳಲಾಗದ, ಹೇಳಿಕೊಂಡರೂ ಕೇಳುವವರಿಲ್ಲದ ನಮ್ಮ ಮಕ್ಕಳ